# ಬಿ.ಕಾಂ. (ಎಂ.ಟಿ.ಎ)
# ಮೊದಲನೇ ಸೆಮಿಸ್ಟರ್



## ಪರಿವಿಡಿ

### I.ಕಾವ್ಯಭಾಗ

೧. ಕುರುಕುಳಾಂತಕಂ ಗಳಿತಕೋಪನೇ [ಈ] ಭೀಮಂ ೧–೬

೨. ವಚನಗಳು – ದೇವರ ದಾಸಿಮಯ್ಯ, ಬಸವಣ್ಣ, ನೀಲಮ್ಮ, ಮುಕ್ತಾಯಕ್ಕ ೭–೧೧

೩. ದೇವರು–ಪೂಜಾರಿ – ಕುವೆಂಪು ೧೨–೧೫

೪. ಗಂಗಾಮಯಿ – ಚಂದ್ರಶೇಖರ ಕಂಬಾರ ೧೬–೧೯

### II . ಕಥಾ ಸಾಹಿತ್ಯ

೧. ಸೆರೆ – ಯಶವಂತ ಚಿತ್ತಾಲ ೨೦–೩೪

೨. ರೊಟ್ಟಿ – ಪಿ. ಲಂಕೇಶ್ ೩೫–೪೨

೩. ಜೀತ – ಬೆಸಗರಹಳ್ಳಿ ರಾಮಣ್ಣ ೪೩–೫೩

### III .ಜಾನಪದ

೧. ಕತೆ – ಧೀರಕುಮಾರ ೫೪–೫೯

೨. ಲಾವಣಿ – ವೀರರಾಣಿ ಚೆನ್ನಮ್ಮ ೬೦–೭೦

೩. ಲೇಖನ – ಪ್ರಾಚೀನ ಕಲೆ ತೊಗಲು ಗೊಂಬೆಯಾಟ – ಡಾ. ಡಿ.ಕೆ. ರಾಜೇಂದ್ರ ೭೧–೮೧

### IV . ಲೇಖನ ವೈವಿಧ್ಯ

೧. ಕನ್ನಡ ಗ್ರಂಥೋದ್ಯಮ – ಶ್ರೀಮಾಧವ ಎನ್. ರಟ್ಟೀಹಳ್ಳಿ ೮೨–೯೩

೨. ಕನ್ನಡ ಅಂಕಣ ಸಾಹಿತ್ಯ – ಡಾ. ಸದಾನಂದ ಕನವಳ್ಳಿ ೯೪–೧೦೪

೩. ವ್ಯವಹಾರ ಮತ್ತು ನೈತಿಕತೆ – ಜಿ.ಎನ್. ಮಲ್ಲಿಕಾರ್ಜುನಪ್ಪ ೧೦೫–೧೧೦

# I ಕಾವ್ಯ ಭಾಗ

## ೧. ಕುರುಕುಳಾಂತಕಂ ಗಳಿತಕೋಪನೇ [ಈ] ಭೀಮಂ

– ರನ್ನ

**ಆಶಯ :**

ಪರಮ ಜಿನೇಂದ್ರವಾಣಿಯ ಸರಸ್ವತಿ, ಬೇಱದ್ದು ಪೆಣ್ಣರೂಪಮಂ ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ ದರಿಸುವ ಭವ್ಯ ಕೋಟಿಗೆ ನಿರಂತರ ಸೌಖ್ಯಮನೀವುದಾನದರ್ಕೆರೆದಪೆನಾ ಸರಸ್ವತಿ ಮಾಟಿ ಮಗಿಲ್ಲಿಯೆ ವಾಗ್ವಿಳಾಸಮಂ

– ಪಂಪ

ಜೈನಕವಿಗಳು ಕನ್ನಡ ಸಾಹಿತ್ಯದಲ್ಲೂ ಮೊದಲಿಗರು ಎಂಬ ಕಾರಣಕ್ಕಾಗಿ ಅವರಿಗೆ ಗೌರವ ಸಲ್ಲುವುದು ನ್ಯಾಯವಾದರೂ ಅದಕ್ಕಿಂತ ಹೆಚ್ಚಾಗಿ ಅವರು ರೂಢಿಗೆ ತಂದ ಮೌಲ್ಯಗಳಿಂದಾಗಿ, ಸಮಾಜದಲ್ಲಿ ಆ ಮೌಲ್ಯಗಳು (ಅವು ಅದರ್ಶೀ ಕೃತವೇ ಆದರೂ) ಬದುಕಿ ಉಳಿಯಲು ಹೆಣಗಾಡಿದವರು ಎಂಬ ಕಾರಣಕ್ಕಾಗಿ ಅವರಿಗೆ ಮನ್ನಣೆ ಸಿಕ್ಕುವುದು ನ್ಯಾಯವಾಗಿದೆ.

"ಯಾವ ಭಾವನೆ ಅಥವಾ ಆದರ್ಶಗಳು ಒಟ್ಟು ಜನಜೀವನವನ್ನು ಹಿಡಿದು ನಡೆಯಿಸುತ್ತವೆಯೋ, ಯಾವುದನ್ನು ಪಡೆಯಲು ಅಥವಾ ಆಗಲು ಒಂದು ಕಾಲದ ಒಂದು ಜನಾಂಗ ಹಂಬಲಿಸುತ್ತದೆಯೋ, ಯಾವ ಭಾವನೆ ಅಥವಾ ಆದರ್ಶಗಳಿಗೆ ಉಳಿದ ಭಾವನೆ ಅಥವಾ ಆದರ್ಶಗಳಿಗಿಂತ ಹೆಚ್ಚು ಪ್ರಾಮುಖ್ಯವುಂಟೋ ಅವುಗಳನ್ನು ಮೌಲ್ಯಗಳೆಂದು ಕರೆಯಬಹುದು. ಈ ಮೌಲ್ಯಗಳು ಕಾಲದಿಂದ ಕಾಲಕ್ಕೆ ದೇಶದಿಂದ ದೇಶಕ್ಕೆ ಭಿನ್ನವಾಗಬಹುದು. ಒಂದು ಸಂಸ್ಕೃತಿಯ ದೊಡ್ಡತನವನ್ನು ಅದು ಭಿನ್ನವಾಗಬಹುದು. ಒಂದು ಸಂಸ್ಕೃತಿಯ ದೊಡ್ಡತನವನ್ನು ಅದು ಜನಮನದಲ್ಲಿ ನಿಲ್ಲಿಸುವ ಮೌಲ್ಯಗಳಿಂದ ಅಳೆಯಬಹುದು."

– ಡಾ. ಎಂ. ಚಿದಾನಂದ ಮೂರ್ತಿ



ಕುರುಭೂಭೃದ್ಬಲ [ತೂಲಕಾ]೧ ಲಪವನಂ ಕೌರವ್ಯಗಂಧೇಭಕೇ–
ಸರಿ ದುಶ್ಯಾಸನರಕ್ತರಕ್ತವದನಂ, ದುರ್ಯೋಧನೋರುಕ್ಷಮಾ–
ಧರವಜ್ರಂ ಕುರುರಾಜರತ್ನ ಮಕುಟೋತ್ಕೂಟಾಂಘ್ರಿ ಸಂಘಟ್ಟ ಸಂ–
ಗರನೆಂದೆಂದಭಿವರ್ಣಿಪೆಂ ರಣಯಶಃ ಶ್ರೀರಾಮನಂ ಭೀಮನಂ॥

ಆ ಪ್ರಸ್ತಾವದೊಳ್ ದೃಷ್ಟಾದೃಷ್ಟಪರಂಪರೆಯೆಂಬ ವೃದ್ಧಕಂಚುಕಿಯುಂ ಬುದ್ಧಿಮತಿಯೆಂಬ ಮೇಳದ ಕೆಳದಿಯುಂ ಬೆರಸು ದೇವಾಸುರ ಯುದ್ಧಕ್ಕೆಕರಗಂಬೊತ್ತಳೆಂಬಂತೆಅನವರತವಾರಿಧಾರಾಪೂರಪರಿವಾರ (ಹಿ) ತಪಲ್ಲವನೇತ್ರೆಯುಂ ಅಸಹ್ಯಪರಭವಾನಲದಂದಹ್ಯಮಾನಗಾತ್ರೆಯುಂ ಆಗಿ ಯಜ್ಞವೇದೀಸಂಭವೆಯುಂ [ಯಾಜ್ಞಸೇನಿಯುಂ] ದ್ರುಪದರಾಜೋಪವನ ಜಯವೈಜಯಂತಿಯಂ ಎನಿಸಿದ ಪಾಂಚಾಲರಾಜತನೂಜೆ ಪವಮಾನ ತನೂಜನಲ್ಲಿಗೆ ವಂದು

ಖಳದುಶ್ಯಾನವಕ್ಷಃ–
ಸ್ಥಳೋಚ್ಚಲತ್‌ಕೃಷ್ಣರಕ್ತಜಲದಿಂ ಕೋಪಾ–
ನಳನಂ ಮ(ಟ್ಗಿಸಿ ನೀನುಂ)
ಗ(ಳಾ) ಗಳಿತಕೋಪನಿರ್ಪ ತೆಱದಿಂದಿರ್ದಯ್ ॥

ವಿನಯಮನೆ ಬಗೆದು ವಿಕ್ರಮ–
ಮನೆ ಬಗೆ (ಯೆವೆ)ನರನುಮಾನುಮೆನಗಂ ಸಂಮೋ–
ಹನಮಾದುದಕ್ಕುಮಂದ–
ಣ್ಣನ ಸೂನೃತವಚನಮೆಂಬ ಮಂತ್ರಾಕ್ಷರದಿಂ ॥

ಗಳಿಯಸುತೆರೆ ಕಬರಿಭರಂ
ಗಳಿಯಿಸುತಿರೆ ನಯನವಾರಿ ನಿನ್ನಾನನದಿಂ
ನಳಿನಾನನೆ ನೀನಿರೆ ಕುರು
ಕುಳಾಂತಕಂ ಗಳಿತಕೋಪನೇ [ಈ] ಭೀಮಂ ॥

ಸತ್ಯಪ್ರತಿಜ್ಞನೆನೆ ಕುರು–
ಪತ್ಯೂರುಕಿರೀಟಭಂಗಮಂ ಪಡೆದು ಜಗತ್–
ಸ್ತುತ್ಯಕೃತಕೃತ್ಯನೆನಿಸದೆ
ಸತ್ಯಾಶ್ರಯವೆಸರ್ಗೆ ಮುಯ್ಯನಾಂಪನೆ ಭೀಮಂ ॥

ನೀನಗ್ನಿ ಪುತ್ರಿಯಯ್ ಪರ್ವ
ಮಾನತನೂಭವನೆನಾನಣಂ ಕೂ[ಡಿರೆ ಸಂ]-
ಧಾನಮರಿನೃಪರೊಳೆಂತನ–
ಲಾನಿಲಸಂಯೋಗಮುರಿಪದಿರ್ಕುಮೆ ಪಗೆಯಂ ॥

ಕುರುಕುಲಜೀವಾಕರ್ಷಣ–
ಪರಿಣತಮಿದು ಕಾಳಹಸ್ತಮಲ್ಲದೆ ಪರಮೇ–
ಶ್ವರಿ ಕೇಶಹಸ್ತಮಕ್ಕುಮೆ
ಪರಾಭವಜ್ವಲನಧೂಮಕೃಷ್ಣಂ ಕೃಷ್ಣೇ ॥

ಕುರುನಂದನರಂ ಕೊಂದೆಂ
ಕುರುಶಾಬಾನುಜನ ನೆತ್ತರಂ ಕುಡಿದೆಂ ಪೂ–
ಣ್ದೆರಡಂ ತೀರ್ಚಿದೆನಿರ್ದಪು–
ವೆರಡುಮವಂ ತೀರ್ಚೆ ತೀರ್ಚದಿರ್ಪೆನೆ ಪಗೆಯಂ ॥

ಊರುಗಳನುಡಿವೆನೊದೆವೆಂ
ಕೌರವಪರಿವೃಢನ ಮಕುಟಮಂ ವೇಣೀಸಂ
ಹಾರಂ ಮಾಡುವೆನದಱಿಂ
ಭಾರಮದಿನೆತಲ್ಲದೆನ್ನ ಪರಿಭವಭಾವಂ ॥

ಕುರುಕುಲಶೋಣಿತಪಾದಪದ್ಮತಳಂ ತಳೋ–
ದರಿಗೆ ವೃಕೋದರನಾಗಿಪಂ ಕಚಬಂಧ ಬಂ–
ಧುರತೆಯನಾತನ ಪೂಣ್ದ ಪೂಣ್ಕೆ ಶಿಳಾತಳಾ
ಕ್ಷರಮೆನಿಸಿರ್ಪ ಜನೋಕ್ತಿಯಂ ಪುಸಿಮಾಳ್ಪನೇ ॥

ಅಱನ ಮಗಂ ಪ್ರಾರ್ಥಿಸೆ ಬಾಂ–
ದೊಱೆಯ ಮಗಂ ಮಾಡೆ ಸಂಧಿಯಾದಪುದೆನುತುಂ
ಮಱುಗುವೆ [ಅಣ್ಣ]ನ ಮಾತಂ
ಪೆಱಗಿಕ್ಕುವೆನಜ್ಜನಿರ್ದು ಮಾಣ್ಪೊಡಮೀಯೆಂ ॥



ಎಂದು ಕೌರವ್ಯಕುಲಕಾಲಾನಲನುಂ ಕುರುರಾಜನಿರ್ವ್ಯಾಜನಿಬಿಡೋರುದ್ವಯಭಂಗ ಪ್ರತಿಜ್ಞಾಭಾರಮಂ ಫಣಿಪತಿಕೇತನಧೂಮಕೇತುವುಂ ಪಾಂಡವಬಲಪ್ರಾಕಾರನುಂ ಏಕಾಂಗವೀರನುಂ ಜರಾಸಂಧಸಂಧಿಬಂಧವಿಘಟನನುಂ ಇಱಿವ ಬೆಡಂಗನುಂ ಅಕಲಂಕಚರಿತನುಂ ಅಮ್ಮನ ಗಂಧವಾರಣನುಂ ಸಾಹಸಾಂಕನುಂ ಎನಿಸಿದ ಭೀಮಸೇನನಂತು ಆರೂಢಕೋಪನುಂ ಪ್ರತಿಜ್ಞಾರೂಢನುಂ ಆ [ಗೆ]

ಸಮದೇಭಕುಂಭಭೇದ ನ–
ಸಮಯೋಗ್ರನಖಂಗೆ ಹರಿಗೆ ಮೃಗರಿಪುವೆಸರು–
ತ್ತಮಿಕೆಯೆ ನಿನಗೆ ಜರಾಸಂ–
ಧಮಥನ ಕುರುವೈರಿವೆಸರದೇನುನ್ನತಿಯೇ ॥

ಇಱಿವ ಬೆಡಂಗ ದೇವ ಪರಮೇಶ್ವರ ಸಾಹಸಭೀಮ ನಿನ್ನೊಳಾ–
ರಿಱಿದು ಬರ್ದುಂಕುವರ್ ನಿಜಭುಜೋಗ್ರಗದಾಪರಿಘಪ್ರಹಾರದಿಂ
ಪಱಿವಱಿಯಾಗಿ ಪು[ಣ್ಣು] ವೆಣನಾಗಿ ಮರುಳ್ಗಣಿಸಾಗಿ ಯುದ್ಧದೊಳ್
ಕುಱಿದಱಿಯಾಗಿ ಬಿಟ್ಟರಿಬಲಂಗಳೆ ಪೇಟವೆ ನಿನ್ನ ಬೀರಮಂ ॥

ಎಂದು ಅನಲನಂದನೆ ಅನಿಲನಂದನನಂ ಪೊಗೞ್ದು

ಒಡಲೊಡಮೆಯೆಂಬಿವೆರಡುಂ
ಕೆಡಲಿರ್ಪುವು ಕೆಡದ ಕಸವರಂ ಜಸಮದಱಿಂ
ಕೆಡುವೊಡಲೊಡಮೆಯನೆಂದುಂ
ಕೆಡವೊಡಮೆಗೆ ಮಾಱುಗುಡುವುದಿಟೆವ ಬೆಡಂಗಾ ॥

ಮಣಿ ಕನಕಂ ವಸ್ತು ವಿಭೂ–
ಷಣಂಗಳಂ ಕೊಟ್ಟು ಪೆಂಡಿರೊಲ್ವರೆ ಗಂಡರ್
ಗುಣಮನೆ ಮೆಱೆವುದು ಶಸ್ತ್ರ–
ವ್ರಣಮಂ ನಿನ್ನಂತೆ ಮೆಜೆವುದಿಱಿವ ಬೆಡಂಗಾ ॥

ಎಂದು ಮೂದಲಿಸಿ ನುಡಿಯೆ

## ಕವಿ ಪರಿಚಯ

**ರನ್ನ :** ೧೦ನೇ ಶತಮಾನದ ಕೊನೆಯಲ್ಲಿದ್ದ ರನ್ನ ರತ್ನತ್ರಯರಲ್ಲಿ ಒಬ್ಬ. ಜೈನ ಮತೀಯನಾದ ಈತನ ಊರು ಮುದುವೊಳಲು. ಪಂಪನ ಕಾವ್ಯ ಮಾರ್ಗದಲ್ಲೇ ಮುಂದುವರಿದ ಈತ, 'ಅಜಿತನಾಥ ಪುರಾಣ'ವೆಂಬ ಆಗಮಿಕ ಕಾವ್ಯವನ್ನೂ 'ಸಾಹಸಭೀಮ ವಿಜಯ' ಅಥವಾ 'ಗದಾಯುದ್ಧ'ವೆಂಬ ಲೌಕಿಕ ಕಾವ್ಯವನ್ನು ರಚಿಸಿ ಕವಿಚಕ್ರವರ್ತಿ ಎಂಬ ಬಿರುದನ್ನು ಪಡೆದಿದ್ದಾನೆ. ತನ್ನ ಆಶ್ರಯದಾತ ಸತ್ಯಾಶ್ರಯ ಅಥವಾ ಇರಿವಬೆಡಂಗನನ್ನು ಮಾಹಾಭಾರತದ ಭೀಮನೊಂದಿಗೆ ಹೋಲಿಸಿ ಗದಾಯುದ್ಧವನ್ನು ರಚಿಸಿದ್ದಾನೆ. ಅಜಿತಸೇನಾಚಾರ್ಯರನ್ನು ಗುರುವನ್ನಾಗಿ ಪಡೆದ ಈತನಿಗೆ ಚಾವುಂಡರಾಯ ಹಾಗೂ ಅತ್ತಿಮಬ್ಬೆಯರೂ ಆಶ್ರಯದಾತರಾಗಿದ್ದರು.

ಚಂಪೂ ಕೃತಿಯಾದ 'ಸಾಹಸ ಭೀಮ ವಿಜಯಂ' ಅಥವಾ 'ಗದಾಯುದ್ಧ' ರನ್ನ ಕವಿಯ ಕೃತಿ ರತ್ನ. ಈ ಕೃತಿಗೆ ಪ್ರಭಾವ, ಪ್ರೇರಣೆ ಪಂಪಭಾರತದ ೧೩, ೧೪ನೇ ಆಶ್ವಾಸಗಳಲ್ಲಿದೆ. ಅವನು ಸಿಂಹಾವಲೋಕನ ಕ್ರಮದಲ್ಲಿ ಸಮಸ್ತ ಭಾರತದ ಘಟನೆಗಳನ್ನು ನೆನಪಿಗೆ ಕೊಟ್ಟು ಕೃತಿಯನ್ನು ರಚಿಸಿದ್ದಾನೆ. ನಾಟಕೀಯತೆ, ವಿಶೇಷಣಗಳ ಬಳಕೆ ರನ್ನನ ಕೃತಿಯ ಪ್ರಧಾನ ಗುಣಗಳು, ಕವಿ ರನ್ನನು ಭಾಸನ ಊರು ಭಂಗ, ಭಟ್ಟನಾರಾಯಣನ ವೇಣೀಸಂಹಾರ ಮೊದಲಾದವುಗಳಿಂದಲೂ ಪ್ರಭಾವಿತನಾಗಿದ್ದಾನೆ.

ಪ್ರಸ್ತುತ ಕಾವ್ಯ ಭಾಗದಲ್ಲಿ ದ್ರೌಪದಿ ಶತ್ರು ದುರ್ಯೋಧನನ್ನು ನಾಶಗೈಯ್ಯಲು ಭೀಮನನ್ನು ಪ್ರೇರೇಪಿಸಿದ ರೀತಿ ಹಾಗೂ ಭೀಮನು ಉದ್ದೀಪಿತನಾಗಿ 'ದುರ್ಯೋಧನನ್ನು ಕೊಂದು ನಿನ್ನ ಮುಡಿಯನ್ನು ಕಟ್ಟಿ, ಕಣ್ಣೀರನ್ನು ತೊಡೆದಲ್ಲದೆ ನನ್ನ ಕೋಪ ಶಮನವಾಗುವುದಿಲ್ಲ' ಎಂಬುದಾಗಿ ಪ್ರತಿಜ್ಞೆ ಮಾಡುತ್ತಾನೆ. ದ್ರೌಪದಿಗೆ ಈ ಪ್ರತಿಜ್ಞೆ ಸಂತಸ ಹಾಗೂ ಸಮಾಧಾನವನ್ನು ತರುತ್ತದೆ.

'ಪ್ರಸ್ತುತ ಭಾಗಕ್ಕೆ ತೀ.ನಂ.ಶ್ರೀಯವರ ಟಿಪ್ಪಣಿಗಳನ್ನು ಬಳಸಿಕೊಳ್ಳಲಾಗಿದೆ.'

### ಕಠಿಣ ಪದಗಳ ಅರ್ಥ :

ಕುರುಭೂಭೃತ್–ಕುರುರಾಜನ; ಕಾಲ ಪವನಂ–ಪ್ರಳಯಕಾಲದ ವಾಯುವಿನಂತೆ ಇರುವವನು ಅಂದರೆ ತೂರಿ ಬಿಡತಕ್ಕವನು; ಊರು–ತೊಡೆ; ಕರಗ–ಗಡಿಗೆ, ನೀರಿನ ಗಡಿಗೆ; ಪರಿಭವಾನಲ–ಅಪಮಾನಾಗ್ನಿಯಿಂದ; ಗಾತ್ರೆಯುಂ–ಶರೀರವುಳ್ಳವಳೂ; ಉಚ್ಚಲತ್–ಮೇಲಕ್ಕೆ ಹಾಯುತ್ತಿರುವ; ಗಳಿತಕೋಪಂ–ಕೋಪ ಇಳಿದುಹೋದವನು; ಸೂನೃತ ವಚನ–ಪ್ರಿಯವೂ ಸತ್ಯವೂ ಆದ ಮಾತು; ಗಳಿಯಿಸು–ಗಳಿತವಾಗು; ಮುಯ್–ಪ್ರತಿಫಲ–ಪ್ರಯೋಜನ; ಆಂಪನೆ–ತಳೆಯುತ್ತಾನೆಯೇ; ಅನಲಾನಿಲಸಂಯೋಗಂ–ಬೆಂಕಿಗಾಳಿಗಳ ಸಂಯೋಗ; ಕಾಳಹಸ್ತ–ಯಮನಕ್ಕೆ;



ಕೇಶಹಸ್ತ–ಕೇಶಸಮೂಹ; ಶಾಬ–ಮರಿ; ಪೂಣ್ದ–ಪ್ರತಿಜ್ಞೆ ಮಾಡಿದ; ಉಡಿ–ಮುರಿ; ವೇಣಿಸಂಹಾರ–(ದ್ರೌಪದಿಯ) ಜಡೆಯನ್ನು ಒಟ್ಟುಗೂಡಿಸಿ ಕಟ್ಟುವುದು; ಪೂಣ್ಕೆ–ಪ್ರತಿಜ್ಞೆ; ಶಿಳಾತಳಾಕ್ಷರಂ–ಕಲ್ಲ ಮೇಲೆ ಕೊರೆದ ಅಕ್ಷರ; ಅಜಿನ ಮಗಂ–ಯಮಧರ್ಮನ ಮಗ; ಅಟಿ–ಧರ್ಮ; ಗಂಧವಾರಣ–ತಂದೆಯ ಮದದಾನೆ; ಇಭ–ಆನೆ; ಹರಿ–ಸಿಂಹ; ಗದಾಪರಿಘ–ಲಾಳಮುಂಡಿಗೆಯಂತಿರುವ ಗದೆ; ಕಸವರ–ಹೊನ್ನು; ಶಸ್ತ್ರವ್ರಣ–(ಶತ್ರುಗಳ) ಆಯುಧಗಳಿಂದ ಆದ ಗಾಯ.

### ಪ್ರಶ್ನೆಗಳು :

೧. ಭೀಮನ ಪಶ್ಚಾತಾಪದ ಮಾತುಗಳು ಕಾವ್ಯಭಾಗದಲ್ಲಿ ಹೇಗೆ ಮೂಡಿ ಬಂದಿದೆ?

೨. ರನ್ನನು ಚಿತ್ರಿಸಿದ ಭೀಮಸೇನನ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

೩. ಭೀಮಸೇನ ಅಥವಾ ದ್ರೌಪದಿಯ ಪಾತ್ರ ಪರಿಚಯ ಮಾಡಿಕೊಡಿ.

೪. ಭೀಮ ಸೇನನ ಪ್ರತಿಜ್ಞೆ ಯಾವುದು? ಅದು ವ್ಯಕ್ತವಾದ ಸಂದರ್ಭದ ಸ್ವಾರಸ್ಯವನ್ನು ಚಿತ್ರಿಸಿ.

೫. "ನಾಟಕೀಯ ಸನ್ನವೇಶಗಳ ಸೃಷ್ಟಿ ಕಾವ್ಯಭಾಗದಲ್ಲಿ ಶಕ್ತಿಯುತವಾಗಿವೆ" ಈ ಹೇಳಿಕೆಯನ್ನು ಸಮರ್ಥಿಸಿ.

೬. ದ್ರೌಪದಿ ಶತ್ರು ದುರ್ಯೋಧನನನ್ನು ನಾಶಗೈಯ್ಯಲು ಭೀಮನನ್ನು ಉದ್ದೀಪಿಸಿದ ರೀತಿಯನ್ನು ವರ್ಣಿಸಿ,

೭. ದ್ರೌಪದಿಯ ಮಾತುಗಳಿಂದ ಉದ್ದೀಪಿತನಾದ ಭೀಮನ ಮನೋಭಾವವನ್ನು ಕುರಿತು ಬರೆಯಿರಿ.

೮. "ಕಣ್ಣೀರನ್ನು ತೊಡೆದಲ್ಲದೆ ನನ್ನ ಕೋಪ ಶಮನವಾಗುವುದಿಲ್ಲ" ಎಂದು ಭೀಮನು ಹೇಳಲು ಕಾರಣವಾದ ಘಟನೆಯ ಸ್ವಾರಸ್ಯವನ್ನು ಕುರಿತು ಬರೆಯಿರಿ.

*

# ೨. ವಚನಗಳು

– ವಚನಕಾರರು

**ಆಶಯ :**

ಕರ್ನಾಟಕ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ. ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ, ಸಮಾಜದ ಎಲ್ಲ ವರ್ಗ, ಎಲ್ಲ ವರ್ಣಗಳ ಜನಸಮುದಾಯ ಬಸವಣ್ಣನವರ ನೇತೃತ್ವದಲ್ಲಿ ಕೈಗೊಡ್ಡಿದ್ದ ವ್ಯಕ್ತಿ ಕಲ್ಯಾಣ ಮತು ಸಮಾಜ ಕಲ್ಯಾಣ ಚಳುವಳಿಯ ಸೃಷ್ಟಿಯೆನಿಸಿದ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿವೆ.

"ವಚನ" ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯ ಪ್ರಕಾರವೆಂದು ಅರ್ಥವಲ್ಲ ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೆ ಇರಲಿ. ನುಡಿ ಮಾತ್ರ ಕಲಾತ್ಮಕವಾಗಿದ್ದುದು, "ರಚನೆ"ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ "ವಚನ" ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ. ಅನುಭಾವಿಗಳ ಸಾಹಿತ್ಯ ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿ ಮಾತುಗಳ ಮೂಲಕ ಹೇಳುತ್ತಾರೆ. ಬಿಡಿಮುತ್ತುಗಳಂತೆ ನೂರೆಯಾದ ಅವುಗಳನ್ನು ಸಂಗ್ರಹಿಸುವ, ಸಂಕಲಿಸುವ ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧನೆಯಾದ ತ್ರಿಪಿಟಿಕ, ಶರಣರ ಸಂದೇಶವಾದ ವಚನಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲಗಳಾಗಿವೆ.

– ಡಾ. ಎಂ.ಎಂ. ಕಲಬುರ್ಗಿ



**ಜೇಡರ ದಾಸಿಮಯ್ಯ**

ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ?
ಕಡೆಗೀಲು ಬಂಡಿಗಾಧಾರ
ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಡಭಕ್ತರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥ

ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು ನಿನ್ನೆನ್ನ ಜಡಿದೊಮ್ಮೆ ನುಡಿಯದಿರಾ
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮಾನಾಥ

**ಬಸವಣ್ಣ**

ಉಳ್ಳವರು ಶಿವಾಲಯ ಮಾಡುವರು
ನಾನೇನ ಮಾಡುವೆ ಬಡವನಯ್ಯಾ
ಎನ್ನ ಕಾಲೇ ಕಂಭ ದೇಹವೇ ದೇಗುಲ
ಶಿರವೇ ಹೊನ್ನ ಕಳಶವಯ್ಯಾ
ಕೂಡಲಸಂಗಮ ದೇವಾ ಕೇಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ
ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ
ಕೂಡಲಸಂಗಮ ದೇವಾ

**ನೀಲಮ್ಮ**

ನನ್ನನಾರೂವರಿಯರು,
ನಾನು ಸ್ವರ್ಗಿಯಲ್ಲ ಅಪವರ್ಗಿಯಲ್ಲ;
ನನ್ನನಾರೂವರಿಯರು,

ನಾನು ಮುಕ್ತಳಲ್ಲ ಅಮುಕ್ತಳಲ್ಲ
ನನ್ನನಾರೂ ಅರಿಯರು,
ಸಂಗಯ್ಯನವಲ್ಲ ರೂಪಿಲ್ಲದ ಹೆಣ್ಣಾದ ಕಾರಣ ನನ್ನನಾರೂ ಅರಿಯರು। ॥

ನಾಡನಾಳಹೋದರೆ
ಆ ನಾಡು ಅಳುವ ಒಡೆಯಂಗೆ ನಾಡೆ ಹಗೆಯಾಯಿತ್ತು
ಹಗೆಯಳಿದು ನಿಸ್ಸಂಗವಾಯಿತ್ತು.
ನಿಸ್ಸಂಗ ವೇದ್ಯವಾಗಿ
ಸಂಗಯ್ಯನಲ್ಲಿ ಮುಕ್ತಳಾದೆನು ನಾನು.

**ಮುಕ್ತಾಯಕ್ಕ**

ನುಡಿಯಲು ಬಾರದು ಕೆಟ್ಟನುಡಿಗಳ
ನಡೆಯಲು ಬಾರದು ಕೆಟ್ಟನಡೆಗಳ
ನುಡಿದಡೇನು ನುಡಿಯದಿರ್ದಡೇನು?
ಹಿಡಿದವ್ರತ ಬಿಡದಿರಲು, ಅದೆ ಮಹಾಜ್ಞಾನದಾಚರಣೆ
ಎಂಬೆನು ಅಜಗಣ್ಣ ತಂದೆ.

ನೀರಬೊಂಬೆಗೆ ನಿರಾಳದ ಗೆಜ್ಜೆಯಕಟ್ಟಿ
ಬಯಲ ಬೊಂಬೆಯ ಕೈಯಲ್ಲಿ ಕೊಟ್ಟು ಮುದ್ದಾಡಿಸುತ್ತಿರ್ದನಯ್ಯಾ
ಕರ್ಪೂರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕಿ
ಅಗ್ನಿ ಕರಗಿ ಕರ್ಪೂರ ಉಳಿದುದಕ್ಕೆ ಬೆರಗಾದೆನಯ್ಯಾ
ಎನ್ನ ಅಜಗಣ್ಣನ ಯೋಗಕ್ಕೆ.

## ವಚನಕಾರರ ಪರಿಚಯ

ಜೇಡರದಾಸಿಮಯ್ಯ, ಬಸವಣ್ಣ, ನೀಲಮ್ಮ, ಮುಕ್ತಾಯಕ್ಕ, ಹನ್ನೆರಡನೇ ಶತಮಾನದಲ್ಲಿ ಜರುಗಿದ ವಚನ ಚಳುವಳಿ ನಮ್ಮ ಕನ್ನಡ ನಾಡಿನ ಚರಿತ್ರೆಯಲ್ಲಷ್ಟೇ ಏಕೆ ಅಖಂಡ ಭರತ ಖಂಡದ ಚರಿತ್ರೆಯಲ್ಲೇ ಒಂದು ಕ್ರಾಂತಿಕಾರಕ ಘಟನೆ. ಸಮಾಜದ ಎಲ್ಲ ವರ್ಗದ ಶ್ರಮಿಕ ಸಮುದಾಯದ ಜನರು ಅರಿವಿಗೆ ದೀವಿಗೆ ಹಿಡಿದು ತಮ್ಮ ಬಾಳಿನಲ್ಲಿ ಮುತ್ತಿದ್ದ ಹಲವು ಪರಿಯ ಕತ್ತಲನ್ನು ಕಳೆಯಲು ಪ್ರಯತ್ನಿಸಿದ್ದ ಕಾಲಘಟ್ಟ ಇದು. ಕಾಯಕ – ದಾಸೋಹಗಳ ಪರಿಕಲ್ಪನೆಯಲ್ಲಿ



ಬದುಕು ಮತ್ತು ಧರ್ಮವನ್ನು ಸಂಲಗ್ನಗೊಳಿಸಿಕೊಂಡು ಕಲ್ಯಾಣ ರಾಜ್ಯದ ಕನಸನ್ನು ನನಸು ಮಾಡಲು ತೊಡಗಿದ ಆಂದೋಲನವಿದು. ಆಳು, ಅರಸ, ಉಚ್ಚ –ನೀಚ ಎಂಬ ವಿಭೇದವನ್ನು ಕಳೆದು ಮಾನವ ಪ್ರೀತಿಯ ಆರೋಗ್ಯಕರ ಸಂಬಂಧದಲ್ಲಿ ಸಮುದಾಯವನ್ನು ರೂಪಿಸುವ ಆಶಯ ಈ ಆಂದೋಲನದ ನಡೆಯಾಗಿತ್ತು ಇಂಥ ಆಂದೋಲನದ ಉಪವಸ್ತುವಾಗಿ ಹುಟ್ಟಿದ್ದೇ ವಚನ ಸಾಹಿತ್ಯ.

**ಜೇಡರ ದಾಸಿಮಯ್ಯ :** ಆದ್ಯವಚನಕಾರ ಈತ ನೇಕಾರವರ್ಗದಿಂದ ಬಂದವನು. ಲಿಂಗಭೇದ ಮತ್ತು ಮೌಢ್ಯಗಳನ್ನು ವಿರೋಧಿಸಿದ ಪ್ರಖರ ಚಿಂತಕರಾಗಿ ಹೆಸರಾಗಿದ್ದಾರೆ. 'ರಾಮನಾಥ' ಇವರ ಅಂಕಿತ. ಕನ್ನಡದ ಮೊದಲ ಅಂಕಿತ. ಈತನ ಹೆಂಡತಿ ದುಗ್ಗಲೆಯೂ ವಚನಕಾರ್ತಿ.

**ಬಸವಣ್ಣ :** ಜಗಜ್ಯೋತಿಬಸವೇಶ್ವರರು ೧೨ನೆಯ ಶತಮಾನದಲ್ಲಿ ವಚನಕ್ರಾಂತಿಯ ನೇತಾರರು. ಬಸವನ ಬಾಗೇವಾಡಿಯಲ್ಲಿ ಜನಿಸಿದ ಇವರ ತಂದೆ ಮಾದರಸ, ತಾಯಿ ಮಾದಲಾಂಬಿಕೆ. ಕೂಡಲಸಂಗಮದಲ್ಲಿ ಜಾತವೇದಗಳ ಶಿಷ್ಯರಾಗಿ ಬೆಳೆದ ಇವರು ಕಲ್ಯಾಣದ ಕ್ರಾಂತಿಗೆ ಕಾರಣರಾದರು. ಜಾತೀಯತೆಯ ನಿರ್ಮೂಲನೆ, ಸಮಾನತೆ ಸ್ಥಾಪನೆಗಾಗಿ ತಮ್ಮನ್ನೇ ಸಮರ್ಪಿಸಿಕೊಂಡ ವಿಶ್ವದ ಅತ್ಯುನ್ನತ ದಾರ್ಶನಿಕರಾಗಿದ್ದಾರೆ.

**ನೀಲಮ್ಮ :** ನೀಲಾಂಬಿಕೆ, ನೀಲಲೋಚನೆ – ಈ ಹೆಸರುಗಳಿಂದ ಪ್ರಸಿದ್ಧಳಾದ ಈಕೆ ಬಸವಣ್ಣನವರ ಹೆಂಡತಿ. ಮೊದಲನೆಯ ಹೆಂಡತಿಯಾದ ಗಂಗಾಂಬಿಕೆ ಸೋದರ ಮಾವನಾದ ಬಲದೇವನ ಮಗಳೆಂದು ಸ್ಪಷ್ಟವಿದೆ – ಆದರೆ ನೀಲಾಂಬಿಕೆ ಯಾರ ಮಗಳೆಂಬ ವಿಷಯವಾಗಿ, ಇವಳ ನಿಜನಾಮದ ವಿಷಯವಾಗಿ ಕಾವ್ಯಗಳು ಸಂದೇಹ ರೂಪದ ಅಭಿಪ್ರಾಯಗಳನ್ನು ನೀಡಿವೆ. ಹರಿಹರ ಮತ್ತು ಭೀಮಕವಿ ಗಂಗಾಭಿಕೆಯೊಂದಿಗೆ "ಮಾಯಾದೇವಿ" ಎಂಬ ಹೆಸರನ್ನು ಬಳಸಿರುವುದನ್ನು ನೋಡಿದರೆ ಮಾಯಾದೇವಿಯ ಇನ್ನೊಂದು ಹೆಸರು ನೀಲಾಂಬಿಕೆಯೆಂದು ಊಹಿಸಬೇಕಾಗುತ್ತದೆ.

ನೀಲಲೋಚನೆಯ ಜೀವನದ ವಿವರಗಳು ಅಷ್ಟಾಗಿ ನಮಗೆ ತಿಳಿದು ಬರದಿದ್ದರೂ ಬಸವಣ್ಣನ ಬದುಕಿನಲ್ಲಿ ಇವಳ ಪ್ರವೇಶ ಅತಿ ಮುಖ್ಯವಾದುದೆಂದು ವಚನಸಾಹಿತ್ಯ, ಕಾವ್ಯಸಾಹಿತ್ಯಗಳು ಸ್ಪಷ್ಟಪಡಿಸುತ್ತವೆ. ಸಾಮಾಜಿಕ ಸುಧಾರಣೆಯ, ಧಾರ್ಮಿಕ ಜಾಗ್ರತೆಯ ಮಹಾಮಣಿಹವನ್ನು ಹೊತ್ತ ಬಸವಣ್ಣನಿಗೆ ಹಿನ್ನೆಲೆ ಮುನ್ನೆಲೆಯಾಗಿ ದುಡಿದ ಇವಳು, ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ತಂಗಡಿಯಲ್ಲಿ ಐಕ್ಯಳಾದಳೆಂದು ಪ್ರತೀತಿಯಿದೆ.

**ಮುಕ್ತಾಯಕ್ಕ:** ಅಜಗಣ್ಣ, ಅಜಗಣ್ಣ ತಂದೆ, ಎಂಬ ಮುದ್ರಿಕೆಗಳಿಂದ ೩೭ ಚನಗಳನ್ನು ಬರೆದ ಮುಕ್ತಾಯಕ್ಕನ ಅನುಭಾವಿತ ನೆಲೆ ಶಿವಶರಣೆಯರಲ್ಲಿ ಎದ್ದು ಕಾಣುವಂತಹದು. ಅಜಗಣ್ಣ ಮತ್ತು ಮುಕ್ತಾಯಕ್ಕ ಅಣ್ಣ–ತಂಗಿಯಾಗಿದ್ದು, ಇಬ್ಬರೂ ವಚನ ರಚನೆ ಮಾಡಿದ್ದಾರೆ. ಅಣ್ಣನನ್ನೇ ಗುರುವಾಗಿ ಸ್ವೀಕರಿಸಿದ ಮುಕ್ತಾಯಕ್ಕ ಆ ಹೆಸರನ್ನೇ ತನ್ನ ಮುದ್ರಿಕೆಯಾಗಿ ಇಟ್ಟುಕೊಂಡದು ಸಹಜವಾಗಿದೆ.

**ಪ್ರಶ್ನೆಗಳು :**

೧. ಡಾಂಭಿಕ ಭಕ್ತರನ್ನು ದಾಸಿಮಯ್ಯನ ವಚನಗಳು ಹೇಗೆ ವಿಡಂಬಿಸಿವೆ?

೨. ದಾಸಿಮಯ್ಯನವರ ಭಕ್ತಿಯ ಸ್ವರೂಪವನ್ನು ವಿವರಿಸಿ.

೩. "ಒಡಲು" ದಾಸಿಮಯ್ಯನವರ ವಚನಗಳ ಹಿನ್ನೆಲೆಯಲ್ಲಿ ವಿವರಿಸಿ.

೪. ಬಸವಣ್ಣನವರ "ಸ್ಥಾವರ'– 'ಜಂಗಮ" ಪರಿಕಲ್ಪನೆಯನ್ನು ವಿವರಿಸಿ.

೫. "ಕರ್ತಾರನ ಕಮ್ಮಟ" ಯಾವುದು? ಅದರ ವ್ಯಾಪ್ತಿ ವಚನಗಳಲ್ಲಿ ಹೇಗೆ ಪ್ರಕಟಗೊಂಡಿದೆ?

೬. "ದೇಹವೇ ದೇಗುಲ" ಬಸವಣ್ಣನವರ ವಚನದ ಹಿನ್ನೆಲೆಯಲ್ಲಿ ವಿವರಿಸಿ.

೭. ನೀಲಮ್ಮನ ವಚನಗಳಲ್ಲಿ ವ್ಯಕ್ತವಾದ ವೈಚಾರಿಕತೆಯನ್ನು ಕುರಿತು ಬರೆಯಿರಿ.

೮. ವ್ಯಕ್ತಿ ತನ್ನನ್ನು ತಾನೇ ಅರಿಯುವ ಬಗೆಯನ್ನು ವಚನಕಾರರು ಹೇಗೆ ನಿರೂಪಿಸಿದ್ದಾರೆ?

೯. ಮುಕ್ತಾಯಕ್ಕ ನಿರೂಪಿಸುವ ನಡೆ–ನುಡಿಗಳನ್ನು ವಿವರಿಸಿ.

೧೦. ಮುಕ್ತಾಯಕ್ಕಳ ವಚನಗಳ ಆಶಯವೇನು?

೧೧. ಸ್ವತಂತ್ರ ವ್ಯಕ್ತಿತ್ವದ ದೃಢತೆ" ವಚನಕಾರ್ತಿಯರ ವಚನಗಳಲ್ಲಿ ಹೇಗೆ ವ್ಯಕ್ತಗೊಂಡಿದೆ?

*



# ೩. ದೇವರು – ಪೂಜಾರಿ

– ಕುವೆಂಪು

**ಆಶಯ:**

ಪ್ರಖರ ನಿರೂಪಣೆಗೆ ಹೆಸರಾದ ಕುವೆಂಪು ಅವರ ಪುಸ್ತಕಕವನ ಓದುಗರನ್ನ ಚಿಂತೆಗೆ ಹಚ್ಚುತ್ತದೆ. ಕತ್ತಲೆ ಬರಿ ನಿಸರ್ಗದಲ್ಲ ಮಾನಸಿಕ, ಬೌದ್ಧಿಕ ಕತ್ತಲೆಗಳೂ ನಮ್ಮನ್ನು ಆವರಿಸಿವೆ. ಆಸೆ– ಮೌಢ್ಯ ಅಜ್ಞಾನಗಳೆಂಬ ಕತ್ತಲೆಗಳು ಭಕ್ತಿಯನ್ನು ಪ್ರದರ್ಶನ ವಸ್ತುವಾಗಿಸಿವೆ. ಆಚಾರ–ಧರ್ಮಗಳು ಕಬ್ಬಿಣದ ನೇಣುಗಳಾಗುತ್ತವೆ. ಇಂಥ ಕತ್ತಲೆಯಲ್ಲಿ ಮುಳುಗಿದಾಗ ಮೌಢ್ಯವೆಂಬ ಕಾಡಿಗೆ ಬೆಂಕಿಹಚ್ಚಿ ಜ್ಞಾನದ ಬೆಳಕು ನೀಡುವ ಯತ್ನ ನಡೆದಾಗ ಪುರೋಹಿತ ಶಾಹಿಗಳು ಆ ಯತ್ನವನ್ನ ಸುಟ್ಟು ಬೂದಿಮಾಡಿ ಮೆರೆಯುತ್ತಾರೆ. ಉದ್ಧಾರಕರನ್ನು ಈ ನಾಡು ಸಹಿಸುವುದಿಲ್ಲ ಎಂಬ ಸೂಚನೆ ಇಲ್ಲಿದೆ. ಸುಧಾರಿಸುವ ದೈವಿ ಚೇತನಗಳಿಗೆ ಉಳಿವಿಲ್ಲ. ಶೋಷಿಸುವ ಪೂಜಾರಿಗಳೇ ಉಳಿಯುತ್ತಾರೆ ಎಂಬ ಸೂಚನೆ ಇಲ್ಲಿದೆ.

೧

ದಿಗಂತದಿಂದೆ ದಿಗಂತಕೆ ಹಬ್ಬಿದೆ
ವಿಶ್ವವ ತಬ್ಬಿದೆ
ರುಂದ್ರ ರಾತ್ರಿ !
ಸಾಂದ್ರ ತಮಂಧದಿ ಮುಳುಮುಳುಂಗುತೆ ಕರಂಗಿದೋಲಿದೆ ಧಾತ್ರಿ!
ವಿಶಾಲ ವ್ಯೋಮದಿ ತಾರೆಗಳಿಲ್ಲ,
ಶಶಿಯಿಲ್ಲ,
ಕಾಂತಿಯ ಕಣವಿಲ್ಲ !
ಜಗತ್ತು
ಪ್ರಜ್ಞೆಯಿಲ್ಲದೆ ಶೂನ್ಯಮಹಾಶವ ಬಿದ್ದವೊಲಿದ್ದತ್ತು !

೨

ಹುಸಿಮಮತೆ,
ಇಂದ್ರಿಯ ಲೋಲುಪತೆ,
ಮೌಢ್ಯದ ಸಂತೃಪ್ತಿ,
ಅಜ್ಞಾನದ ಸುಪ್ತಿ !
ಭಕ್ತಿಯ ಹೆಸರನು ಧರಿಸುತೆ ಮೆರೆಯುವ ಚಿತ್ತದ ದಾಸ್ಯ :
ದೇವರ ಗುಡಿ ಎಂಬುವ ಸೆರೆಯಲ್ಲಿ
ಸ್ವಾತಂತ್ರ್ಯದ ಶವಸಂಸ್ಕಾರದ ಪರದೆಯ ಮರೆಯಲ್ಲಿ
ಪೂಜೆಯ ನಕಲಿಯ ಪರಿಹಾಸ್ಯ !
ಶಾಸ್ತ್ರದ ಆಚಾರದ ಧರ್ಮದ ಕಬ್ಬಿಣನೇಣು,
ಸಿಲುಕಿಹುದದರಲಿ ಮಾನವನಮೃತಾತ್ಮದ ಗೋಣು!

೩

ಇರೆ ಇಂತುಟು ಭುವನದ ಬಾಳು,
ಅದೊ ನೋಡದೊ ಕೇಳು :
ನಿದ್ರೆಯ ಕದಡಿದೆ ಅವತಾರನ ತೂರ್ಯದ ವಾಣಿ :
ಕಂಪಿಸುತಿದೆ ಜಡತೆಯೊಳದ್ದಿದ ಕ್ಷೋಣಿ !
ದಕ್ಷಿಣ ಹಸ್ತದಿ ಪ್ರಜ್ವಲಿಸುತ್ತಿದೆ ಉರಿವ ಹಿಲಾಲು,
ಕತ್ತಲೆಯನು ಕತ್ತರಿಸುವ ಬೆಂಕಿಯ ಕರವಾಳು!
ಮೌಢ್ಯ ಕಾನನಕೆ ಬೆಂಕಿಯ ಹೊತ್ತಿಸಿ
ತಿಮಿರ ಸಮುದ್ರದ ಶೋಷಿಸಿ ಬತ್ತಿಸಿ
ಪ್ರಸರಿಸಿ ಜ್ವಾಲಾಜ್ಯೋತಿಯ ನಡೆದಿರೆ ಅವತಾರನು ಮುಂದೆ,
ಆದೊ ಹೊರಟನು ಪೂಜಾರಿಯು ಹಿಂದೆ!
ಪಂಚಪಾತ್ರೆಯಲಿ ಪಾವನತೀರ್ಥವ ಬಂಧಿಸುತೆ
ವಂದನೆ ಆರಾಧನೆ ಅಭಿಷೇಕದ ನೆವದಿಂದೆ
ಅವತಾರನು ಹೊತ್ತಿಸಿದುರಿಯನು ಅಗ್ರೋದಕದಿಂ ನಂದಿಸುತೆ,
ಬೆಂಕಿಯನಾರಿಸಿ ಬೂದಿಯ ಮಾಡಿ
ಆ ಬೂದಿಯ ಮಹಿಮೆಯ ಕೊಂಡಾಡಿ
ಅದೊ ಹೊರಟನು ಪೂಜಾರಿಯು ಹಿಂದೆ !
ಭಕ್ತರು ದೂರದ ತೂರ್ಯವನಾಲಿಸಿ ಬಳಿ ಬರುವನಿತರಲಿ
ಆ ತೂರ್ಯ ಮಹಾಸ್ವನವೆಲ್ಲಿ ?



ಕೇಳುತಲಿದೆ ಪೂಜಾರಿಯ ಬರಿ ಕಿರುಗಂಟೆಯುಲಿ !
ಅವರಾ ಕಂಡಾ ಕಿಚ್ಚಿನ ಕಾಂತಿಯದೆಲ್ಲಿ ?
ಬೆಳಕಿಗೆ ಬದಲಾಗವರನು ಕಾದಿದೆ ಬರಿ ಬೂದಿಯ ರಾಶಿ !
ಕಟ್ಟ ಕಡೆಯಲಿ
ದೇವರ ಗುಡಿಯಲಿ
ಪೂಜಾರಿಯೆ ದಿಟದ ನಿವಾಸಿ :
ದೇವರೆ ಪರದೇಶಿ !
ಜ್ಯೋತಿಯ ಬಯಸುತೆ ಬಹ ಭಕ್ತರಿಗೆ ವಿಭೂತಿಯ ಹಂಚುವನು!
ಬೆಂಕಿಯ ನಂದಿಸಿ
ಬೂದಿಗೆ ವಂದಿಸಿ
ದೇವರ ಮರೆಗೈಯುತೆ ಪೂಜಾರಿಯೆ ಮಿಂಚುವನು!

೪

ಸರಿ, ಮತ್ತೆ–
ದಿಗಂತದಿಂದೆ ದಿಗಂತಕೆ ಹಬ್ಬಿದೆ ರುಂದ್ರರಾತ್ರಿ!
ಸಾಂದ್ರ ತಮಂಧದಿ ಮುಳುಮುಳುಗುತ್ತೆ
ಕರಂಗಿದೋಲಿದೆ ಧಾತ್ರಿ!

## ಕವಿ ಪರಿಚಯ

**ಕುವೆಂಪು :** ಹೊಸಗನ್ನಡದ ಮೊದಲ ಮಹಾಕವಿ. ಎರಡನೇ ರಾಷ್ಟ್ರಕವಿ ಕುವೆಂಪು ಅವರು ಮಲೆನಾಡಿನ ಕೊಡುಗೆ. ೨೯–೧೨–೧೯೦೪ ರಂದು ಚಿಕ್ಕಮಗಳೂರು ಜಿಲ್ಲೆ ಹಿರೇಕೊಡಗಿನಲ್ಲಿ ಜನಿಸಿದ ಕುವೆಂಪು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯವರು. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಮಹತ್ವದ ಕೃತಿಗಳನ್ನು ನೀಡಿರುವ ಕುವೆಂಪು ಅವರು 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ರಚಿಸಿ ಕನ್ನಡಕ್ಕೆ ಪ್ರಥಮ ಕೇಂದ್ರ ಸಾಹಿತ್ಯ ಅಕಾಡೆಮಿ, ಪ್ರಥಮ ಜ್ಞಾನ ಪೀಠ ಮತ್ತು ಪ್ರಥಮ ಪಂಪ ಪ್ರಶಸ್ತಿಗಳನ್ನು ತಂದುಕೊಟ್ಟರು. ಕನ್ನಡದ ಗೌರಿಶಂಕರ ಕುವೆಂಪು ೧೯೯೪ ರಲ್ಲಿ ನಿಧನರಾದರು. ನವೋದಯ ಸಂದರ್ಭದಲ್ಲಿ ವೈಚಾರಿಕತೆಯನ್ನು ನಿರೂಪಿಸಿದ ಕುವೆಂಪುರವರ ಪ್ರಗತಿಪರತೆ, ಸಮನ್ವಯತೆ, ವಿಶ್ವಮಾನವ ಪ್ರಜ್ಞೆ ಆದರಣೀಯ. ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು.

**ಪ್ರಶ್ನೆಗಳು :**

೧. ದೇವರು ಮತ್ತು ಪೂಜಾರಿ ಕವಿತೆಯಲ್ಲಿ ದೇವರು ಯಾರು? ಏನನ್ನು ಪ್ರತಿನಿಧಿಸುತ್ತಾನೆ?

೨. ದೇವರು ಮತ್ತು ಪೂಜಾರಿ ಮೌಢ್ಯ ಮತ್ತು ವೈಚಾರಿಕತೆಗಳ ಸಂಘರ್ಷವನ್ನು ಹೇಗೆ ನಿರೂಪಿಸುತ್ತದೆ? ವಿವರಿಸಿ.

೩. 'ದೇವರು ಮತ್ತು ಪೂಜಾರಿ' ಕವಿತೆಯಲ್ಲಿ ಅವತಾರ ಪುರುಷನ ಪ್ರಯತ್ನಗಳು ಮತ್ತು ಪೂಜಾರಿಯ ಪ್ರತಿಕ್ರಿಯೆಗಳು ಹೇಗೆ ಚಿತ್ರಣಗೊಂಡಿವೆ?

೪. ದೇವರು ವಿವೇಕ – ವೈಚಾರಿಕತೆಯನ್ನು ಪೂಜಾರಿ ಮೌಢ್ಯ ಸಂಪ್ರದಾಯಗಳನ್ನು ಪೋಷಿಸುತ್ತಾರೆ. ದೇವರು ಮತ್ತು ಪೂಜಾರಿ ಕವಿತೆ ಮೂಲಕ ಸಮರ್ಥಿಸಿ.

*



# ೪. ಗಂಗಾಮಾಯಿ

**ಡಾ. ಚಂದ್ರಶೇಖರ ಕಂಬಾರ**

**ಆಶಯ:**

ಕೆರೆಯೊಂದನ್ನು ಕೇಂದ್ರ ಪ್ರತಿಮೆಯಾಗಿಸಿಕೊಂಡು ಬಂದಿರುವ ಇಲ್ಲಿ ಸಂಕೇತ ಪ್ರತಿಮೆಗಳೇ ಮುಖ್ಯವಾಗಿ ನವ್ಯತನ ಎದ್ದು ಕಾಣುತ್ತದೆ. ನಮ್ಮ ಸಮಾಜದ ಬದುಕು ಸೂರ್ಯೋದಯದೊಂದಿಗೆ ಶುರುವಾಗುವ ಕೆರೆಯ ಬದುಕು ಏನೆಲ್ಲಗಳಿಗೆ ಸಾಕ್ಷಿಯಾಗುತ್ತದೆ. ನೈರ್ಮಲ್ಯ ಪ್ರಜ್ಞೆಯ ಕೊರತೆ, ಮೌಢ್ಯತೆಯ ಪೋಷಣೆ ಹೇಗೆ ಬದುಕನ್ನು ಹದಗೆಡಿಸುತ್ತದೆ ಎಂಬುದರ ಆಲೋಚನೆ ಮೈನಡುಗಿಸುತ್ತದೆ.

ನಿಂತನೀರಾದ ಬದುಕಿನಲ್ಲಿ ಮೌಢ್ಯವೆ ಮೆರೆಯುತ್ತದೆ. ತೋಂಡಿ ಸಂಪ್ರದಾಯದ ಮೂಲಕವೇ ಹರಿದ ಗಾಳಿ ಮಾತುಗಳೇ ಬಲವಾದ ನಂಬಿಕೆಗಳಾಗುತ್ತವೆ. ಅನೈತಿಕತೆ, ಅರ್ಥಹೀನತೆಗಳು ಹರಿಯುವ ಹೊಳೆಯಾಗ ಬೇಕಾದ ಜೀವನವನ್ನು ನಿಂತ ನೀರಿನ ಕೆರೆಯಾಗಿಸಿ, ಹೊಂಡವಾಗಿಸಿ ಕೊಳೆಸಿಬಿಡುತ್ತದೆ. ಒಂದು ಕೆರೆಯ ಪ್ರತಿಮೆ ಮೂಲಕ ನಾಡಿನ ಸಮಾಜದ ಬದುಕನ್ನ ಪ್ರತಿಮಿಸುವ ಮೂಲಕ ಎಚ್ಚರಿಸುವ ಪ್ರಯತ್ನ ಇಲ್ಲಿದೆ.

ಕೆಂಪಾನ ಕೆಂಪುಗುಡ್ಡ, ಬೆಳ್ಳಾನ ಬಿಳಿಗುಡ್ಡ ಒಡಮುರಿದು ಕೂಡಿದ
ಒಡ್ಡಿನಲ್ಲೇ ನಮ್ಮೂರ ಕೆರೆ; ಹೆಸರು ಗಂಗಾಮಾಯಿ.
ಮೂರು ಬದಿ ಮರಗಿಡ ಕಂಟಿ ಸಸ್ಯಕೋಟಿಯ, ಹೊಕ್ಕವನು
ಹೊರಬರದ ಏಳುಸುತ್ತಿನ ಕೋಟೆ. ಒಳಗಡೆಯಲ್ಲಿ ನಾಯಿ ನರಿ
ಹಂದಿ ಶುಕಪಿಕಾದಿಯ ಚೌರ್‍ಯಾಂಸಿ ಲಕ್ಷ ಕೀಚು ಕಿರಚು
ಅದಕದಕ್ಕೆ ಅದರದರ ಪಾಲಿನ ಗಾಳಿ ಮಳೆ ಬೆಳಕು, ಮೆಳೆ
ಪೊದೆ ಹಸಿರು ಆಹಾರ ಭಯ ನಿದ್ರೆ ಮೈಥುನಾದಿಗಳು.
ದಡದ ಗಿಡಗಳ ನೆತ್ತಿ ಜೋತ ಭಾವಲಿ ಹಿಂಡು
ನೀರಿನೆದೆಯಲ್ಲದರ ವಕ್ರ ನೆರಳು.
ತಲೆತಲಾಂತರದ ಹೊಲಿತೆಪ್ಪ ನೊಣನೊರಜು ಕೀಟಗಳ ಸದಾ
ಸಂಚಾರ, ಕೊಡುಕೊಲ್ಲು ವ್ಯವಹಾರ, ದರ ನಿರಾತಂಕ.

ತಂಗಾಳಿ ಸುಳಿಯದ, ದೊಡ್ಡ ತೆರೆ ಮೂಡಿ ಮುಳುಗದ,
ಹರಿಯುವುದಕ್ಕೆ ದಿಕ್ಕಿಲ್ಲದ ನೀರು ಹಳೆಮರದ ಬೇರುಗಳಲ್ಲಿ, ಊರಿನ
ಗಟಾರು ಮೋರಿಗಳಲ್ಲಿ,
ಏಡಿಮಣ್ಣಿನ ಗೋಲ ಬಿಳಿಗುದ್ದಿನಲ್ಲಿ ಪಿಸು ನುಡಿಯುವುದು.

ಮೂಡಣದ ಮುದಿಕರುವೊಡೆದುನೆತ್ತರು ಕೀವು ಸೋರಿತೋ–
ಸುರುವಾಯ್ತಿಲ್ಲಿ ಚಲನೆ: ತೆರೆಯ ಮಿಡಿನಾಗರಗಳೆದ್ದು
ಮುರಿದಾಡಿ, ಮಣಿದು, ಹೊಡಮರಳಿ, ತಳುಕು ಬಿದ್ದಾಡಿ ಮೂಡಿದ್ದ
ಬಾವಲಿಹಿಂಡು ಗೆರೆಗೆರೆಯಾಗಿ ಹಂಚಿ, ಹಲವಾರಾಗಿ, ಸುಕ್ಕು ಗಟ್ಟಿ
ಸುತ್ತುವುವು. ರಾಡಿ ಗಿಜಿಗಿಜಿ ಕೆಸರು ನೀರಿನಲ್ಲಿ ಅಂಗಾತಾಗಿ
ತೇಲುವ ಚಿಳಿಮಿಳಿ ಮೀನ ಹೆಕ್ಕಿ ತಿನ್ನುತ್ತ ತಿರುಗುವವು
ಒಂಟಿಗಾಲಿನ ನೂರೆಂಟು ಬಕ. ತೊಡಗುವವರು ಮಂದಿ ಈ
ನೀರ ಬಳಸುವುದಕ್ಕೆ ಕುಡಿಯುವುದಕ್ಕೆ, ಮೀಯಲಿಕ್ಕೆ, ದನದ
ಸೆಗಣಿ ಮೈಗಂಜಳ ತೊಳೆಯಲಿಕ್ಕೆ, ನಮ್ಮಪ್ಪ ಬೀರಪ್ಪನ ಪಾದ
ಪಡಕೊಳ್ಳಲಿಕ್ಕೆ. ಹಡದವ್ವ ಕರ್ರೆವ್ವನ ಕರಿಮೈ ಎರೆಯಲಿಕ್ಕೆ,
ಹೊರಕಡೆಗೆ, ಹೇಲುಚ್ಚೆಗೆ, ಬೋಳಿಯರ ಮಡಿ ಒದ್ದೆಗೆ,
ಭಟ್ಟರಾಚಮನಕ್ಕೆ, ಅದಕ್ಕೆ ಇದಕ್ಕೆ ಎದಕ್ಕು.
ಒಟ್ಟು ಖರ್ಚಾದ ಕೆರೆನೀರು ಬಚ್ಚಲದಿಳಿಜಾರಿನಗುಂಟ ಹರಿದು
ಕೆರೆಗೇ ಸೇರುವ ದಿನನಿತ್ಯದ ವ್ಯವಹಾರ, ಈ ಕೆರೆಯ ಚಮತ್ಕಾರ.

ಇದಕ್ಕೂ ಇವೆ ಹಳ್ಳಿ ಹಾರುವರು ಚಂಡಿಕೆಯಂತೆ ಹೊಸೆದ
ಗಂಗಾಷ್ಟಕ ಶತಕ, ಲಹರಿ, ಸಹಸ್ರನಾಮಾವಳಿ, ಸ್ಥಳ ಪುರಾಣಗಳು ;
ಹಳೇದೇವರ ಜಡೆಯ ಜಿಡ್ಡು, ಮುನಿತೊಡೆಯ ಕಿಲುಬು,
ಕಿವಿಯ ಪಿಸುರು ತೊಡೆದು ಮಡುಗೊಂಡವಳೀ ಗಂಗಾಮಾಯಿ ;
ಅಂತೆಯೆ ಬರುವಾಗ ಉಡಿತುಂಬ ತಂದಳು ತಾಯಿ ; ಆ
ಸೀಮೆಯ ಪವಿತ್ರ ಕೆಸರುಸುಕು ರೋಗಾಣು,
ಹಗ್ಗಕ್ಕೆ ಹಾವೆಂಬ ಭಯ,
ಕಾಂಬ ಕಣ್ಣಿಗೆ ಮಾಯದ ಕನ್ನಡಿಯ
ಘನಮಹಿಮಳು ತಾಯಿ,–ತಾಮ್ರದ ದುಡ್ಡಿನದ್ದಿದ ತಕ್ಷಣವೆ
ಕಿಲುಬಿಸುವಾಕೆ ; ಬೆಳಗಿದರೆ ಬಂಗಾರ ಇಲ್ಲವೆ ಅಂಥ ಭ್ರಮೆಯ
ಹುಟ್ಟಿಸುವಾಕೆ, ಬಂಗಾಲದ ಜಾದುಗಾರರಿಗೆ ಬಾಣಂತಿಯ ಕೈ



ಒದಗಿಸಿದಾಕೆ ಮೂರೇ ಗುಟುಕಿಗೆ ಬಂಜೆಯರ ಗರ್ಭ ಗಟ್ಟಿಗೊಳಿಸಿದಾಕೆ.
ಕಲಿವ ಹುಡುಗರನ್ನು ಸೈಕಲ್ ಸಮೇತ ಹೊಟ್ಟೆಯೊಳಗೆ
ಅಟ್ಟಿಸಿಕೊಂಡಾಕೆ 'ಏಸು ನಡೆದದ್ದು ಇದೇ ನೀರಿನ ಮೇಲೆ'ಂದ
ಪಾದ್ರಿಗೆ ಹೊಲತಿಯ ಮೈತುಂಬಿ ಹೌದೆಂದಾಕೆ.

ಇದರಾಳ ನಿರಾಳ ಅತಳವಿತಳ ಪಾತಾಳ ರಸತಾಳದ
ಒಳಗಿನೊಳಗಿನ ತಳ. ಕಲ್ಲು ಮಣ್ಣಲ್ಲ – ಹಾಗಂದವನ ಬಾಯಿಗೆ
ಬುಚು ಬುಚು ಹುಳ ಬೀಳ–ಮುತ್ತು ರತ್ನದ ಹೇರಳರಾಶಿ
ಇದರ ತಳ, ಅಲ್ಲಿಗೂ ಇಳಿದವರು. ನಾಗಿನಿಯರ ಬಳಸಿದವರೆಂಬ
ಖ್ಯಾತಿಯವರು, ನಾಕೈದಾರು ಜನ, ನಮ್ಮೂರವರೆ, ಕಲ್ಲು ದೇವರಾಗಿ,
ಲಾವಣಿಗೆ ಕಥೆಯಾಗಿ, ಹಬ್ಬ ಹುಣ್ಣಿವೆಗೊಮ್ಮೆ ಪೂಜೆಗೊಳ್ಳುತ್ತಾರೆ.
ಕಂಠಮಟ ಮುತ್ತು ರತ್ನಾದಿಗಳನ್ನೊತ್ತೊತ್ತಿ ತಿಂದ ಪಾಪ
ಚಿಳಿಮಿಳಿ ಮೀನು, ದಕ್ಕಲಾರದೆ ಸುತ್ತು ತೇಲುತ್ತವಂತೆ.
ಅಂತೆಯೇ ಒಂಟಿಗಾಲನ ಬಕವಾಗಿ ಬಕದ ಬಾಯಾಗಿ
ಬಾಯ ಜೊಲ್ಲಾಗಿ ಸುರಿಯುತ್ತಾರೆ ಜನ ಹಗಲು ರಾತ್ರಿ

ಸದ್ಯ ಹಾದರದ ಕೂಸು ಕರ್ಣರಿಗೆ, ಅದನೊಪ್ಪದ ಮುಕ್ಕರಿಗಿದು
ಆಶ್ರಯ ಸ್ಥಾನ, ಇದು ಖರೆ. ಇಂಥಾ ಮಂದಿ ಇರುತ್ತಾರಲ್ಲ
ಗೋರಿಗೆ ದಿಕ್ಕಿರದವರು, ಬೆಂಕಿಯ ರಿಣವಿರದವರು
ಮೂರು ಹಗಲು, ಮೂರು ರಾತ್ರಿ ಕೆರೆಯಲ್ಲಿ ತೇಲಿದ ಮೇಲೆ
ಗಂಗಾಮಾಯಿ ಕಣ್ಣು ತೆರೆಯುತ್ತಾಳೆ. ಆಮೇಲೆ
ಸದರಿಯವರ ದೇಹ ಜಲಚರಗಳಿಗೆ, ಆತ್ಮ ಗಿಡಗಳಿಗೇರಿ
ಜೋತುಬಾವಲಿಯಾಗಿ ಮುತ್ತು ರತ್ನಗಳ ಕಾಯುವ
ಗಂಗವ್ವನ ಖಾಸಾಪೊಲೀಸು ಪಡೆಗೆ ಸೇರುತ್ತಾರಂತೆ.
ಈ ಮಾತಿಗೆ ಭಟ್ಟರ ಪುಸ್ತಕದಲ್ಲಿ, ಕುರುಬರ ಹಾಡಿನಲ್ಲಿ
ಆಧಾರವಿಲ್ಲ ಹೌದು: ಆದರೆ ಭಟ್ಟರು ತೋಂಡಿಯಲ್ಲಿ
ಹೀಗೆಂದು ಅಪ್ಪಣೆ ಕೊಡಿಸಿದ್ದುಂಟು.

## ಕವಿ ಪರಿಚಯ

**ಡಾ.ಚಂದ್ರಶೇಖರ ಕಂಬಾರ :**'ವರಕವಿ' ಬೇಂದ್ರೆ ನಂತರ ಬೆಳಗಿದ ಅಗಾಧ ಜಾನಪದ ಪ್ರತಿಭೆ ಚಂದ್ರಶೇಖರ ಕಂಬಾರರು ಜೋಕುಮಾರ ಸ್ವಾಮಿ, ಸಂಗಬಾಳ್ಯಾದಂಥ ನಾಟಕಗಳನ್ನು ಚಕೋರಿ ಎಂಬ ಮಹಾಕೃತಿಯನ್ನು ಸಿರಿಸಂಪಿಗೆ, ಹೇಳತೇನ ಕೇಳ, ಗಂಗಾಮಾಯಿ ಯಂಥ ವಿಶಿಷ್ಟ ಕೃತಿಗಳನ್ನು ನೀಡಿದ್ದಾರೆ. ಕಂಬಾರರು ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾಗಿ, ೨ ಅವಧಿಗಳಿಗೆ ಸೇವೆ ಸಲ್ಲಿಸಿದ ಮಹನೀಯರಾಗಿದ್ದಾರೆ. 'ಶಿಖರ ಸೂರ್ಯ' ಕಾದಂಬರಿ ಪ್ರಸಿದ್ಧವಾಗಿದೆ. ೧೯೩೭ ರಲ್ಲಿ ಬೆಳಗಾವಿ ಜಿಲ್ಲೆ ಘೋಡಗೇರಿಯಲ್ಲಿ ಜನಿಸಿದ ಕಂಬಾರ ಅಪ್ಪಟದೇಸಿ ಪ್ರತಿಭೆ. ದೇಶ– ವಿದೇಶಗಳಲ್ಲಿ ದೇಸಿಕನ್ನಡದ ಕಂಪನ್ನು ಹರಡಿದ ಇವರು ನಟ, ಗಾಯಕ, ನಾಟಕಕಾರ, ನಿರ್ದೇಶಕ ಹೀಗೆ ಬಹುಮುಖ ಪ್ರತಿಭೆ.

**ಪ್ರಶ್ನೆಗಳು :**

೧. ಗಂಗಾಮಾಯಿ ಕವಿತೆಯಲ್ಲಿ ಕಂಬಾರರು ಕೆರೆಯ ಪರಿಸರವನ್ನು ಹೇಗೆ ಚಿತ್ರಿಸಿದ್ದಾರೆ?

೨. ಸೂರ್ಯೋದಯ ಮತ್ತು ಅದರ ನಂತರದ ಘಟನೆಗಳು ಗಂಗಾಮಾಯಿಯಲ್ಲಿ ಹೇಗೆ ನಿರೂಪಿಸಲ್ಪಟ್ಟಿವೆ?

೩. ಕಂಬಾರರ 'ಗಂಗಾಮಾಯಿ' ನಿಂತ ನೀರಾದ ಬದುಕನ್ನು ಅಲ್ಲಿನ ನಿಷ್ಕ್ರೀಯತೆ –ಮೌಢ್ಯತೆಗಳನ್ನು ಹೇಗೆ ಖಂಡಿಸುತ್ತದೆ ತಿಳಿಸಿ.

೪. 'ಗಂಗಾಮಾಯಿ' ಕಾವ್ಯ ನವ್ಯದ ಪ್ರತಿಮಾತ್ಮಕ ವಿಧಾನವನ್ನು ಹೆಜ್ಜೆಹೆಜ್ಜೆಗೂ ಹೇಗೆ ಪರಿಣಾಮಕಾರಿಯಾಗಿ ಚಿತ್ರಿಸಿದೆ?

೫. ಅನೈತಿಕ ಭ್ರಷ್ಟಾಚಾರ – ಅಜ್ಞಾನಗಳು ಬದುಕನ್ನು ಮಡುಗಟ್ಟಿಸಿಬಿಡುವ ವಿಷಾದ ಕಂಬಾರರ ಕವಿತೆಯಲ್ಲಿ ಹೇಗೆ ಚಿತ್ರಣಗೊಂಡಿದೆ? ವಿವರಿಸಿ.

*